ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ. ಪ್ರತಾಪಸಿಂಹ ನಾಯಕ್ ಅವರು ನಿಯಮ 72 ರ ಅಡಿಯಲ್ಲಿ ಗಮನ ಸೆಳೆಯುವ ಸೂಚನೆಯಲ್ಲಿ ಕೇಳಿರುವ ಪ್ರಶ್ನೆಗೆ ಉತ್ತರ.

8

**ಸೂಚನೆ:**

**ತುಳುನಾಡಿನ ಪ್ರಸಿದ್ಧ ಜಾನಪದ ಕ್ರೀಡೆ "ಕಂಬಳ"ವು ಯುವ ಸಮುದಾಯದ ಫೇವರಿಟ್ ಕ್ರೀಡೆಯಾಗಿ ಬೆಳೆದಿದೆ. ಕರಾವಳಿಯಲ್ಲಿ ನಡೆಯುತ್ತಿರುವ ಆಧುನಿಕ ಕಂಬಳ ವೀಕ್ಷಿಸಲು ದೇಶ-ವಿದೇಶ ಗಳಿಂದ ಲಕ್ಷಾಂತರ ಮಂದಿ ಆಗಮಿಸುತ್ತಿದ್ದಾರೆ. ಅದರಲ್ಲೂ ದಶಕಗಳಿಂದ ಕಂಬಳ ಕ್ರೀಡೆ ಹೊಸ ಮೆರಗು ಪಡೆದುಕೊಂಡಿದ್ದು, ಮಕ್ಕಳಿಂದ ಹಿರಿಯರ ತನಕ ಎಲ್ಲರ ಮನಗೆದ್ದ ಕ್ರೀಡೆಯಾಗಿದೆ. ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ನಡೆಯುವ 20 ಕಂಬಳಗಳಿಗೆ ಧನಸಹಾಯ ನೀಡುವುದಾಗಿ ಘೋಷಣೆ ಮಾಡಿದ್ದು ಸರಿಯಷ್ಟೆ, ಆದರೆ ಇದುವರೆಗೂ ಅನುದಾನ ಬಿಡುಗಡೆಯಾಗಿಲ್ಲ. ಸರ್ಕಾರದಿಂದ ನಿಂತರವಾದ ಪ್ರೋತ್ಸಾಹ ಮತ್ತು ಸೂಕ್ತ ಅನುದಾನದ ನಿರೀಕ್ಷೆಯಲ್ಲಿರುವ "ಕಂಬಳ"ದ ಸಂಘಟಕರಿಗೆ ಅನುದಾನ ದೊರೆಯದೆ ತೊಂದರೆಯಾಗಿದ್ದು ಈ ಗಂಬೀರ ಸಮಸ್ಯೆ ಕುರಿತು ಸದನದಲ್ಲಿ ಪ್ರಸ್ತಾಪಿಸಲು ಗಮನ ಸೆಳೆದಿರುವ ಬಗ್ಗೆ.**

*******

**ಉತ್ತರ:**

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಜಿಲ್ಲಾ ಕಂಬಳ ಸಮಿತಿಗಳಿಂದ ಪ್ರಸ್ತಾಪಿಸಲ್ಪಟ್ಟ ಕಂಬಳ ಕೂಟಗಳ ಪಟ್ಟಿಯೊಂದಿಗೆ ಆಯಾ ಜಿಲ್ಲಾಧಿಕಾರಿಗಳಿಂದ ಹಾಗೂ ಪ್ರತ್ಯೇಕವಾಗಿ ಕಂಬಳ ಸಮಿತಿಗಳಿಂದ ಮತ್ತು ಜನಪ್ರತಿನಿಧಿಗಳಿಂದ ಈ ಕೆಳಕಂಡ ಪಟ್ಟಿಯಲ್ಲಿ ವಿವರಿಸಿರುವ ಸ್ಥಳಗಳಲ್ಲಿ ಕಂಬಳಗಳನ್ನು ಆಯೋಜನೆ ಮಾಡಲು, ಪ್ರವಾಸೋದ್ಯಮ ಇಲಾಖೆಗೆ ಪ್ರಸ್ತಾವನೆಗಳು ಸ್ವೀಕೃತಗೊಂಡಿರುತ್ತದೆ. ವಿವರಗಳು ಕೆಳಕಂಡಂತಿವೆ.

| ಕ್ರ. ಸಂ. | ಸ್ಥಳ | ಜಿಲ್ಲೆ | ಕ್ರ. ಸಂ. | ಸ್ಥಳ | ಜಿಲ್ಲೆ |
|---|---|---|---|---|---|
| 1 | ಕಕ್ಕೆ ಪದವು | ದಕ್ಷಿಣ ಕನ್ನಡ ಜಿಲ್ಲೆ | 12 | ಐಕಳಬಾವ | ದಕ್ಷಿಣ ಕನ್ನಡ ಜಿಲ್ಲೆ |
| 2 | ವೇಣೂರು | ದಕ್ಷಿಣ ಕನ್ನಡ ಜಿಲ್ಲೆ | 13 | ವಾಮಂಜೂರು | ದಕ್ಷಿಣ ಕನ್ನಡ ಜಿಲ್ಲೆ |
| 3 | ಬಾರಾಡಿಬೀಡು | ಉಡುಪಿ ಜಿಲ್ಲೆ | 14 | ಜಪ್ಪಿನಮೊಗರು | ದಕ್ಷಿಣ ಕನ್ನಡ ಜಿಲ್ಲೆ |
| 4 | ಹೊಕ್ಕಾಡಿಗೋಳಿ | ದಕ್ಷಿಣ ಕನ್ನಡ ಜಿಲ್ಲೆ | 15 | ಕಟಪಾಡಿ | ಉಡುಪಿ ಜಿಲ್ಲೆ |
| 5 | ಬಳ್ಕಮಂಜ | ದಕ್ಷಿಣ ಕನ್ನಡ ಜಿಲ್ಲೆ | 16 | ಬಂಟ್ವಾಳ | ದಕ್ಷಿಣ ಕನ್ನಡ ಜಿಲ್ಲೆ |
| 6 | ಮೂಡಬಿದಿರೆ | ದಕ್ಷಿಣ ಕನ್ನಡ ಜಿಲ್ಲೆ | 17 | ಉಪ್ಪಿನಂಗಡಿ | ದಕ್ಷಿಣ ಕನ್ನಡ ಜಿಲ್ಲೆ |
| 7 | ಮೂಲ್ಕಿ ಅರಸು ಕಂಬಳ | ದಕ್ಷಿಣ ಕನ್ನಡ ಜಿಲ್ಲೆ | 18 | ಬಂಗಾಡಿ | ದಕ್ಷಿಣ ಕನ್ನಡ ಜಿಲ್ಲೆ |
| 8 | ಮಿಯ್ಯಾರು | ಉಡುಪಿ ಜಿಲ್ಲೆ | 19 | ಪೈವಳಿಕೆ | ಕಾಸರಗೋಡು ಜಿಲ್ಲೆ |
| 9 | ಅಡ್ವೆ ನಂದಿಕೂರು | ಉಡುಪಿ ಜಿಲ್ಲೆ | 20 | ಸುರತ್ಕಲ್ | ದಕ್ಷಿಣ ಕನ್ನಡ ಜಿಲ್ಲೆ |
| 10 | ಮಂಗಳೂರು | ದಕ್ಷಿಣ ಕನ್ನಡ ಜಿಲ್ಲೆ | 21 | ಪಣಪಿಲ | ದಕ್ಷಿಣ ಕನ್ನಡ ಜಿಲ್ಲೆ |
| 11 | ಪುತ್ತೂರು | ದಕ್ಷಿಣ ಕನ್ನಡ ಜಿಲ್ಲೆ | 22 | ನರಿಂಗಾನ | ದಕ್ಷಿಣ ಕನ್ನಡ ಜಿಲ್ಲೆ |

ಮೇಲಿನ ಪಟ್ಟಿಯಲ್ಲಿ ವಿವರಿಸಿರುವಂತೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಆಯೋಜಿಸಲಾಗುವ ಕಂಬಳ ಉತ್ಸವಗಳ ಸಂಬಂಧ ಸ್ವೀಕೃತವಾದ ಪ್ರಸ್ತಾವನೆಗಳ ಪೈಕಿ ಸರ್ಕಾರದ ಆದೇಶನುಸಾರ ಈ ಕೆಳಗೆ ವಿವರಿಸಿರುವಂತೆ ಕಳೆದ 05 ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಆಯೋಜಿಸಲಾದ "ಕಂಬಳ"ಗಳಿಗೆ ಇಲಾಖಾ ವತಿಯಿಂದ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

- ಕಳೆದ 2020-21ನೇ ಸಾಲಿನಲ್ಲಿ ಜಾನಪದ ಕ್ರೀಡೆಯಾದ ಕಂಬಳವನ್ನು ಉತ್ತೇಜಿಸಿ ಪ್ರೋತ್ಸಾಹಿಸಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉಡುಪಿ ಜಿಲ್ಲೆಯಲ್ಲಿ ತಲಾ 10 ಕಂಬಳಗಳಂತೆ ಒಟ್ಟು 20 ಕಂಬಳಗಳನ್ನು ನಡೆಸಲು ರೂ.5.00 ಲಕ್ಷಗಳಂತೆ ಒಟ್ಟು ರೂ.100.00 ಲಕ್ಷಗಳನ್ನು ಸರ್ಕಾರದ ಆದೇಶ ಸಂಖ್ಯೆ:ಟಿಆಓರ್/75/ಟಿಡಿಬಿ/2021, ದಿನಾಂಕ:18-03-2021ರನ್ವಯ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

--2

- 2021-22ನೇ ಸಾಲಿನಲ್ಲಿ ದಿನಾಂಕ:11-12-2021ರಂದು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯಲ್ಲಿ ನಡೆದ "ಕಂಬಳೋತ್ಸವ"ಕ್ಕೆ ರೂ.10.00 ಲಕ್ಷಗಳನ್ನು ಸರ್ಕಾರದ ಆದೇಶ ಸಂಖ್ಯೆ:ಟಿಆರ್‌/209/ಟಿಡಿವಿ/2021, ದಿನಾಂಕ:31-12-2021ರನ್ವಯ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

- 2022-23ನೇ ಸಾಲಿನಲ್ಲಿ ಮಂಗಳೂರಿನಲ್ಲಿ ನಡೆದ "ರಾಮ-ಲಕ್ಷ್ಮಣ ಜೋಡುಕೆರೆ-6ನೇ ಮಂಗಳೂರು ಕಂಬಳ ಉತ್ಸವ"ಕ್ಕೆ ರೂ.3.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆರವರಿಗೆ ಸರ್ಕಾರದ ಆದೇಶ ಸಂಖ್ಯೆ:ಟಿಆರ್‌/17ಟಿಡಿವಿ/2023, ದಿನಾಂಕ:16-01-2023ರನ್ವಯ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆರವರಿಗೆ ಬಿಡುಗಡೆ ಮಾಡಲಾಗಿರುತ್ತದೆ.

- 2023-24ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ದಿನಾಂಕ:23-03-2024 ರಂದು ಆಯೋಜಿಸಲಾದ "ಪುತ್ತೂರು ಕೋಟಿ-ಚೆನ್ನಯ್ಯ ಜೋಡುಕೆರೆ ಕಂಬಳ" ಕ್ಕೆ ರೂ.5.00 ಲಕ್ಷಗಳನ್ನು ಹಾಗೂ ಉಪ್ಪಿನಂಗಡಿಯಲ್ಲಿ ದಿನಾಂಕ:06-04-2024ರಂದು ನಡೆದ "ಉಪ್ಪಿನಂಗಡಿ ವಿಜಯ-ವಿಕ್ರಮ ಜೋಡುಕೆರೆ ಕಂಬಳ"ಕ್ಕೆ ರೂ.10.00 ಲಕ್ಷಗಳನ್ನು ಅಂದರೆ, ಒಟ್ಟು ರೂ.15.00 ಲಕ್ಷಗಳ ಅನುದಾನವನ್ನು ಸರ್ಕಾರದ ಆದೇಶ ಸಂಖ್ಯೆ: ಟಿಆರ್‌/58/ಟಿಡಿವಿ/2024, ದಿನಾಂಕ:15-03-2024ರ ಅನುಸಾರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರುರವರಿಗೆ ಬಿಡುಗಡೆ ಮಾಡಲಾಗಿತ್ತು. ಆದರೆ, ಪ್ರಸ್ತಾಪಿತ ಕಾರ್ಯಕ್ರಮಗಳಿಗೆ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ, ದಕ್ಷಿಣ ಕನ್ನಡ ಜಿಲ್ಲೆ ಇವರು ಅನುದಾನ ಸೆಳೆಯಲು ಬಿಲ್ಲುಗಳನ್ನು ತಯಾರಿಸಿ ದಿನಾಂಕ:23-03-2024ರಂದು ಜಿಲ್ಲಾ ಖಜಾನೆಗೆ ಸಲ್ಲಿಸಿದ್ದು, ಖಜಾನೆಯಲ್ಲಿ ಬಿಲ್ಲುಗಳ ಸ್ವೀಕೃತಿಯ ಕೊನೆಯ ದಿನಾಂಕ: 20-03-2024 ಆಗಿದ್ದರಿಂದ, ಜಿಲ್ಲಾ ಖಜಾನೆಯ ತಂತ್ರಾಂಶದಲ್ಲಿ ಬಿಲ್ಲುಗಳು ಸ್ವೀಕೃತವಾಗಿರುವುದಿಲ್ಲ.

- ಆದ್ದರಿಂದ, ಸರ್ಕಾರದ ಆದೇಶ ಸಂಖ್ಯೆ: ಟಿಆರ್‌/58/ಟಿಡಿವಿ/2024, ದಿನಾಂಕ:15-03-2024 ರಲ್ಲಿ ಮಂಜೂರಾತಿ ನೀಡಿರುವ ಕಂಬಳ ಉತ್ಸವದ ಅನುದಾನ ರೂ.15.00 ಲಕ್ಷಗಳನ್ನು 2024-25ನೇ ಸಾಲಿನಲ್ಲಿ ಮರು ಬಿಡುಗಡೆ ಮಾಡಲು ಪರಿಶೀಲಿಸಲಾಗುತ್ತಿದೆ.

**TOR 165 TDV 2024**

(ಎಚ್.ಕೆ.ಪಾಟೀಲ)
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು